# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

ದಿನಾಂಕ 16.05.2019 ರಂದು ಮಧ್ಯಾಹ್ನ 01.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ಡಿ.ಶಿವಲಿಂಗಯ್ಯ ರವರ ಅಧ್ಯಕ್ಷತೆಯಲ್ಲಿ ನಡೆದ 9ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಪ್ರೊ. ಡಿ. ಶಿವಲಿಂಗಯ್ಯ**<br>ಮಾನ್ಯ ಕುಲಪತಿಗಳು ಹಾಗೂ<br>ಶೈಕ್ಷಣಿಕ ಮಂಡಳಿಯ ಅಧ್ಯಕ್ಷರು,<br>ಕರಾಮುವಿ, ಮೈಸೂರು. | **ಪ್ರೊ. ರಮೇಶ್. ಬಿ**<br>ಕುಲಸಚಿವರು<br>ಕರಾಮುವಿ,<br>ಮೈಸೂರು. |
| **ಪ್ರೊ. ಜಗದೀಶ**<br>ಡೀನ್ (ಶೈಕ್ಷಣಿಕ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎ. ಖಾದರ್ ಪಾಷಾ**<br>ಹಣಕಾಸು ಅಧಿಕಾರಿಗಳು ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ಪ್ರೊ. ಡಿ.ಬಿ. ಬಸವರಾಜ್**<br>ಡೀನ್ (ಅಧ್ಯಯನ ಕೇಂದ್ರಗಳು) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. | **ಡಾ. ಎಂ.ಎಸ್. ರಮಾನಂದ**<br>ಕುಲಸಚಿವ (ಪರೀಕ್ಷಾಂಗ) ಹಾಗೂ<br>ಶೈಕ್ಷಣಿಕ ಮಂಡಳಿ ಸದಸ್ಯರು<br>ಕರಾಮುವಿ, ಮೈಸೂರು. |
| **ವಿಶೇಷ ಆಹ್ವಾನಿತರು** | |
| **ಡಾ. ಪ್ರಕಾಶ್,**<br>ನಿರ್ದೇಶಕರು – ಐ.ಟಿ. | **ಡಾ. ಸೆಲ್ವಪಿಳ್ಳೆ ಅಯ್ಯಂಗಾರ್,**<br>ನಿರ್ದೇಶಕರು (ಪ್ರವೇಶಾತಿ) |

ಸಭೆಗೆ ಹಾಜರಾಗಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮುಂದುವರೆದು ಮಾನ್ಯ ಕುಲಪತಿಗಳು ಮಾತನಾಡುತ್ತಾ ಶೈಕ್ಷಣಿಕ ಮಂಡಳಿ ಸಭೆಯನ್ನು ಕರೆದಿರುವ ಉದ್ದೇಶವನ್ನು ಸದಸ್ಯರುಗಳ ಗಮನಕ್ಕೆ ತಂದರು.

ಕುಲಸಚಿವರು

ಕುಲಪತಿಗಳು 16/5

**ವಿಷಯ ಸಂಖ್ಯೆ : 09:01**

ವಿಷಯ : ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ : ಇಡಿ 43 ಯುಓವಿ 2018, ದಿನಾಂಕ: 03.05.2019ರಲ್ಲಿ ನೀಡಿರುವ ಸೂಚನೆಯಂತೆ ಅಧ್ಯಾದೇಶಗಳನ್ನು ಸಿದ್ಧಪಡಿಸಿದ್ದು ಅನುಮೋದನೆ ಕೋರಿದೆ.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಯುಜಿ ಮತ್ತು ಪಿಜಿ ಕೋರ್ಸ್‌ಗಳನ್ನು (ಸ್ನಾತಕ/ಸ್ನಾತಕೋತ್ತರ) ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ, ನವದೆಹಲಿ, ಇವರು ಹೊರಡಿಸಿರುವ ದೂರಶಿಕ್ಷಣ ನಿಯಮಾವಳಿ – 2017ರ ಪ್ರಕಾರ ಸಿದ್ಧಪಡಿಸಿದೆ. ಇದರಲ್ಲಿ ಪ್ರವೇಶಾತಿ ಪಡೆಯಬೇಕಾದ ಅರ್ಹತೆಗಳು, ಪಠ್ಯಕ್ರಮಗಳು, ಬೋಧನೆ ಮತ್ತು ಕಲಿಕೆ, ಕ್ರೆಡಿಟ್ ಪದ್ಧತಿ, ವಾರ್ಷಿಕ/ಸೆಮಿಸ್ಟರ್, ಮೌಲ್ಯಮಾಪನದ ಪದ್ಧತಿ ಇತ್ಯಾದಿಗಳನ್ನು ಯುಜಿಸಿ ಹೊರಡಿಸಿರುವ ಅಧಿಸೂಚನೆ F.No. 2-4-2015 (DEB-III), dated: 23rd June 2017 ಪ್ರಕಾರ ಅಳವಡಿಸಿಕೊಳ್ಳಲಾಗಿದೆ. ಸೆಕ್ಷನ್ 24, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕಾಯ್ದೆ 1992ರ ಪ್ರಕಾರ ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳಿಗೆ ಪ್ರತ್ಯೇಕ ಅಧ್ಯಾದೇಶವನ್ನು ಹೊಂದಿರಬೇಕು. ಅದರಂತೆ ಈ ಕೆಳಕಂಡ ಅಧ್ಯಾದೇಶಗಳನ್ನು ವಿಶ್ವವಿದ್ಯಾನಿಲಯದ ಶಾಸನಬದ್ಧ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಕರ್ನಾಟಕ ಸರ್ಕಾರಕ್ಕೆ ದಿನಾಂಕ: 04.10.2017 ರಂದು ಅನುಮೋದನೆಗಾಗಿ ಕಳುಹಿಸಿ ಕೊಡಲಾಗಿತ್ತು.

1. ಎಂ.ಎ., ಮಾಸ್ಟರ್ ಆಫ್ ಟೂರಿಸಂ ಮತ್ತು ಟ್ರಾವೆಲ್ ಮ್ಯಾನೇಜ್‌ಮೆಂಟ್
2. ಎಂ.ಎಸ್ಸಿ.
3. ಬಿ.ಇಡಿ
4. ಬಿ.ಇಡಿ. ವಿಶೇಷ ಶಿಕ್ಷಣ
5. ಎಂ.ಬಿ.ಎ.
6. ಶುಲ್ಕದ ಅಧ್ಯಾದೇಶಗಳು

ದಿನಾಂಕ: 03.05.2019 ರಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು, ಇವರು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದಿದ್ದು, ಸದರಿ ಅಧ್ಯಾದೇಶಗಳನ್ನು ಹೊಸದಾಗಿ ವಿದ್ಯಾವಿಷಯಕ ಪರಿಷತ್ತು ಮತ್ತು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ಅಧ್ಯಾದೇಶದ ಪ್ರತಿಯೊಂದು ಪುಟಕ್ಕೆ ಕುಲಪತಿಗಳು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕುಲಸಚಿವರ ಸಹಿಯೊಂದಿಗೆ ಮತ್ತೊಮ್ಮೆ ಪ್ರಸ್ತಾವನೆಯನ್ನು ತ್ರಿಪತಿಯಲ್ಲಿ ಸಲ್ಲಿಸುವಂತೆ ಹಾಗೂ ಪ್ರಸ್ತಾವನೆಯ ಕೊನೆಯ ಪುಟದಲ್ಲಿ ಮಾನ್ಯ ರಾಜ್ಯಪಾಲರ ಸಹಿಗಾಗಿ ಹೆಚ್ಚಿನ ಸ್ಥಳಾವಕಾಶ ನೀಡುವಂತೆ ನಿರ್ದೇಶಿಸಿರುತ್ತಾರೆ. ಅದರಂತೆ ಮೇಲ್ಕಂಡ 6 ಅಧ್ಯಾದೇಶಗಳನ್ನು ಸಿದ್ಧಪಡಿಸಿ ಶೈಕ್ಷಣಿಕ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಮರುಮಂಡಿಸಿದ್ದು ಅನುಮೋದನೆ ಕೋರಿದೆ.

ವಿಶ್ವವಿದ್ಯಾನಿಲಯದಲ್ಲಿ ಸರ್ಟಿಫಿಕೇಟ್, ಡಿಪ್ಲಮೋ ಹಾಗೂ ಪಿಜಿ ಡಿಪ್ಲಮೋ ಕೋರ್ಸ್‌ಗಳನ್ನು ಆರಂಭಿಸಲಾಗಿ ಇವುಗಳ ಬಗ್ಗೆ (ಶುಲ್ಕ ಸೇರಿ) ಅಧ್ಯಾದೇಶಗಳನ್ನು ಸರ್ಕಾರಕ್ಕೆ ದಿನಾಂಕ: 07.02.2019 ರಂದು ಕಳುಹಿಸಲಾಗಿತ್ತು. ಶುಲ್ಕದ ಅದ್ಯಾದೇಶದಲ್ಲಿ ನೋಂದಣಿ ಶುಲ್ಕವು ಸೇರಿರಲಿಲ್ಲ. ಇದನ್ನು ಪ್ರವೇಶಾತಿ ಪ್ರಕ್ರಿಯೆಯಲ್ಲಿ ಸೇರಿಸಬೇಕೆಂದು ದಿನಾಂಕ: 03.05.2019 ನಡೆದ 51ನೇ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಮೋದಿಸಲ್ಪಟ್ಟಿತ್ತು. ಈ ರೀತಿ ಸೇರ್ಪಡೆಯಾದ ನೋಂದಣಿ ಶುಲ್ಕವನ್ನೊಳಗೊಂಡಂತೆ ಸದರಿ ಕೋರ್ಸ್‌ಗಳ ಶುಲ್ಕ ಅಧ್ಯಾದೇಶವನ್ನು ಪರಿಷ್ಕರಿಸಿ ಶಾಸನಬದ್ಧ ಸಭೆಯಲ್ಲಿ ಮಂಡಿಸಿದ್ದು ಅನುಮೋದನೆ ಕೋರಿದೆ.

**ತೀರ್ಮಾನ : ಸದರಿ ಅಧ್ಯಾದೇಶಗಳನ್ನು ಅನುಮೋದಿಸಲಾಯಿತು.**

----

**ಕುಲಸಚಿವರು** | **ಕುಲಪತಿಗಳು** 16/5

**ವಿಷಯ ಸಂಖ್ಯೆ : 09:02**

**ವಿಷಯ:** 2011-12 ಮತ್ತು 2012-13ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ - ಬಿ.ಎ/ಬಿ.ಕಾಂ.,ಗೆ ಪ್ರವೇಶಾತಿ ಪಡೆದು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುವ ಮತ್ತು ಪರೀಕ್ಷೆ ತೆಗೆದುಕೊಳ್ಳಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಮಾಡಿ ಕೊಡುವ ಬಗೆಗೆ.

*****

2011-12ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ - ಬಿ.ಎ/ಬಿ.ಕಾಂ.,ಗೆ ಪ್ರವೇಶಾತಿ ಪಡೆದು 2011-12, 2012-13, ಮತ್ತು 2013-14 ಸಾಲಿನಲ್ಲಿ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಿ.ಎ/ಬಿ.ಕಾಂ., ಪರೀಕ್ಷೆ ಬರೆದು ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಅವಕಾಶವನ್ನು ಕಲ್ಪಿಸಿಕೊಡಬೇಕಾಗಿರುತ್ತದೆ.

ವಿವಿಯಲ್ಲಿ ಚಾಲ್ತಿಯಲ್ಲಿರುವ ನಿಯಮಗಳನ್ವಯ ಪದವಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಎರಡು ಪಟ್ಟು ಅಂದರೆ 3+3=6 ವರ್ಷ ಅವಧಿಯ ಅವಕಾಶವನ್ನು ಕಲ್ಪಿಸಲಾಗಿತ್ತು. ಅಂತಹ ಆರು ವರ್ಷಗಳ ಅವಧಿ ಅಂದರೆ 2017ರೊಳಗೆ ಪರೀಕ್ಷೆಯನ್ನು ತೆಗೆದುಕೊಂಡು ಪದವಿಯನ್ನು ಪೂರ್ಣಗೊಳಿಸಬೇಕಾಗಿತ್ತು. ಆದರೆ, ವಿ.ವಿ.ನಿಲಯದ ಮಾನ್ಯತೆ ಸಮಸ್ಯೆಯಿಂದ ಯಾವುದೇ ವಾರ್ಷಿಕ ಪರೀಕ್ಷೆಯನ್ನು ಪೆಬ್ರವರಿ 2017ರ ನಂತರ ಮಾಡಿರುವುದಿಲ್ಲ. ಇಂತಹ ವಿದ್ಯಾರ್ಥಿಗಳಿಗೆ ಒಂದು ಅವಕಾಶವನ್ನು ಕಲ್ಪಿಸಬೇಕಾಗಿರುತ್ತದೆ.

2012-13ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ - ಬಿ.ಎ/ಬಿ.ಕಾಂ.,ಗೆ ಪ್ರವೇಶಾತಿ ಪಡೆದು 2012-13, 2013-14 ಮತ್ತು 2014-15ನೇ ಸಾಲಿನಲ್ಲಿ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಿ.ಎ/ಬಿ.ಕಾಂ., ಪರೀಕ್ಷೆ ಬರೆದು ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ವಿವಿಯಲ್ಲಿ ಚಾಲ್ತಿಯಲ್ಲಿರುವ ನಿಯಮಗಳನ್ವಯ ಎರಡು ಪಟ್ಟು ಅಂದರೆ 3+3=6 ವರ್ಷ ಅವಧಿಯ ಅವಕಾಶವನ್ನು ಕಲ್ಪಿಸಲಾಗಿತ್ತು. ಅಂತಹ ಆರು ವರ್ಷಗಳ ಅವಧಿ ಅಂದರೆ 2018ರೊಳಗೆ ಪರೀಕ್ಷೆಯನ್ನು ತೆಗೆದುಕೊಂಡು ಪದವಿಯನ್ನು ಪೂರ್ಣಗೊಳಿಸಬೇಕಾಗಿತ್ತು. ಆದರೆ, ವಿ.ವಿ.ನಿಲಯದ ಮಾನ್ಯತೆ ಸಮಸ್ಯೆಯಿಂದ ಯಾವುದೇ ವಾರ್ಷಿಕ ಪರೀಕ್ಷೆಯನ್ನು ಪೆಬ್ರವರಿ 2017ರ ನಂತರ ಮಾಡಿರುವುದಿಲ್ಲ. ಈವರೆಗೆ ಕೋರ್ಸ್ ಅನ್ನು ಪೂರ್ಣಗೊಳಿಸಲು 2018ರವರೆಗೆ ವಾರ್ಷಿಕ ಪರೀಕ್ಷೆಗಳನ್ನು ನಡೆಸಬೇಕಾಗಿರುತ್ತದೆ. ಇಂತಹ ವಿದ್ಯಾರ್ಥಿಗಳಿಗೆ ಎರಡು ಅವಕಾಶಗಳನ್ನು ಕಲ್ಪಿಸಬೇಕಾಗಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ54 ಯುಓವಿ 2017 (ಭಾಗ-1), ಬೆಂಗಳೂರು, ದಿನಾಂಕ: 05-03-2018ರ ಪ್ರಕಾರ, 2013ರ ಸಾಲಿನ ಪೂರ್ವದಲ್ಲಿ ಪ್ರವೇಶಾತಿ ಪಡೆದು ತಾಂತ್ರಿಕೇತರ ಕೋರ್ಸ್‌ಗಳ (ಇನ್‌ಹೌಸ್) ಹಲವು ಬ್ಯಾಚ್‌ಗಳಲ್ಲಿ ವ್ಯಾಸಂಗ ಮಾಡಿ ಕೋರ್ಸ್‌ಗಳನ್ನು ಅಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಪರಿನಿಯಮಾವಳಿ ಅನ್ವಯ ಅಗತ್ಯ ಕ್ರಮವಹಿಸಲು ಆದೇಶವಾಗಿರುತ್ತದೆ.

ವಿದ್ಯಾರ್ಥಿಗಳ ಮನವಿಯನ್ನು ಪರಿಗಣಿಸಿ, ಮೇಲ್ಕಂಡ ಸರ್ಕಾರಿ ಆದೇಶದನ್ವಯ, ಇಂತಹ ವಿದ್ಯಾರ್ಥಿಗಳ ಪ್ರಯತ್ನವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡುಹೋಗುವ ಸದುದ್ದೇಶದಿಂದ ವಿ.ವಿ.ನಿಲಯವು ಅಂತಹ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಅವಕಾಶಗಳನ್ನು ಕಲ್ಪಿಸಿಕೊಡುವುದು ಸೂಕ್ತವೆಂದು ಭಾವಿಸಿದೆ. ಈ ಬಗ್ಗೆ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಲಾಗಿದೆ.

ಕುಲಸಚಿವರು

ಕುಲಪತಿಗಳು

ತೀರ್ಮಾನ : 2011-12 ಮತ್ತು 2012-13ನೇ ಸಾಲಿನಲ್ಲಿ ಬಿ.ಎ/ಬಿ.ಕಾಂ.,ಗೆ ಪ್ರವೇಶಾತಿ ಪಡೆದು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುವ ಮತ್ತು ಪರೀಕ್ಷೆ ತೆಗೆದುಕೊಳ್ಳಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ, ವಿಶ್ವವಿದ್ಯಾನಿಲಯದಲ್ಲಿ ಜಾರಿಯಲ್ಲಿದ್ದ ನಿಯಮಾವಳಿಗಳ ಪ್ರಕಾರ ಹಾಗೂ ಕರ್ನಾಟಕ ಸರ್ಕಾರದ ಆದೇಶದಂತೆ, ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿ ಕೊಡಬೇಕಾಗುತ್ತದೆ. ಅದರಂತೆ 2011-12ನೇ ಸಾಲಿನ ಬಿ.ಎ./ಬಿ.ಕಾಂ. ವಿದ್ಯಾರ್ಥಿಗಳಿಗೆ ಒಂದು ಅವಕಾಶವನ್ನು ಹಾಗೂ 2012-13ನೇ ಸಾಲಿನ ಬಿ.ಎ./ಬಿ.ಕಾಂ. ವಿದ್ಯಾರ್ಥಿಗಳಿಗೆ ಎರಡು ಅವಕಾಶಗಳನ್ನು ನೀಡಿ ಪರೀಕ್ಷೆ ಬರೆಯುವಂತೆ ನಿರ್ಣಯಿಸಲಾಯಿತು.

ಈ ಸಂಬಂಧ ಪರೀಕ್ಷಾ ವಿಭಾಗವು ಪರೀಕ್ಷಾ ಅಧಿಸೂಚನೆಯನ್ನು ಸಿದ್ಧಪಡಿಸಿ ಸ್ಪಷ್ಟವಾದ ಮಾಹಿತಿಯೊಂದಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಕಳುಹಿಸಿ ಕೊಡುವುದು. ಪರೀಕ್ಷಾ ಶುಲ್ಕವನ್ನು, ಪರೀಕ್ಷಾ ಶುಲ್ಕದ ಅಧ್ಯಾದೇಶದಂತೆ ನಿಗದಿಪಡಿಸಲು ನಿರ್ಣಯಿಸಲಾಯಿತು.

ಅಂತಿಮವಾಗಿ 9ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಗೆ ಆಗಮಿಸಿ ಮಂಡಿತ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಎಲ್ಲ ಸದಸ್ಯರುಗಳಿಗೂ ಮಾನ್ಯ ಕುಲಪತಿಗಳು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು 1/6/15